ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆಗುರುತಿಲ್ಲದ ಪ್ರಶ್ನೆ ಸಂಖ್ಯೆ	:	**136 (146)**
ಸದಸ್ಯರ ಹೆಸರು	:	ಶ್ರೀ. ಘೋಟ್ನೇಕರ ಶ್ರೀಕಾಂತ ಲಕ್ಷ್ಮಣ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು)
ಉತ್ತರಿಸಬೇಕಾದ ದಿನಾಂಕ	:	21.09.2020
ಉತ್ತರಿಸುವ ಸಚಿವರು	:	ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವರು

<table>
<tr><th>ಕ್ರಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ.</td><td>ಕಾರವಾರ ಜಿಲ್ಲೆಯ ಪ್ರೌಢ ಶಾಲಾ ವಿಭಾಗದಲ್ಲಿ ಸಧ್ಯಕ್ಕೆ ಶಿಕ್ಷಕರಿಗೆ ಬಡ್ತಿ ನೀಡುತ್ತಿದ್ದು, ಇದಕ್ಕೆ ಇರುವ ಮಾನದಂಡವೇನು: (ಸವಿಸ್ತಾರ ವರದಿ ನೀಡುವುದು).</td><td>ಸರ್ಕಾರದ ಆದೇಶ ಸಂಖ್ಯೆ: ಇಡಿ 291 ಎಲ್‌ಬಿಪಿ 2015, ದಿನಾಂಕ:29/09/2016ರ ವೃಂದ ಹಾಗೂ ನೇಮಕಾತಿ ನಿಯಮಗಳನ್ವಯ ನೌಕರರ ಜೇಷ್ಠತಾ ನಿಯಮಗಳು 1957ರ ನಿಯಮ 5ರಡಿಯಲ್ಲಿ ತಿಳಿಸಿರುವಂತೆ ಬೇರೆ ಜಿಲ್ಲೆಗಳಲ್ಲಿ ನೇಮಕಾತಿ ಹೊಂದಿ ಪ್ರಸ್ತುತ ಕರ್ತವ್ಯ ನಿರ್ವಹಿಸುತ್ತಿರುವ ಜಿಲ್ಲೆಗೆ ವರ್ಗಾವಣೆ ಹೊಂದಿ ಬಂದಿರುವ ಶಿಕ್ಷಕರ ಜೇಷ್ಠತೆಯನ್ನು ಪ್ರಸ್ತುತ ಜಿಲ್ಲೆಯಲ್ಲಿ ಕರ್ತವ್ಯಕ್ಕೆ ಹಾಜರಾದ ದಿನಾಂಕದಿಂದ ನಿಗದಿಪಡಿಸಿದ್ದು, ಆಯಾ ವರ್ಷವಾರು ಸೇವಾ ಜ್ಯೇಷ್ಠತೆ ಹಾಗೂ ಮೇರಿಟ್ ಆಧಾರದ ಮೇಲೆ ಮೀಸಲಾತಿ ರೋಸ್ಟರ್‌ನ್ನು ಆಧರಿಸಿ ದಿನಾಂಕ:31/08/2020ರಲ್ಲಿ ಇದ್ದಂತೆ "ಸಿ" ವಲಯದಲ್ಲಿ ಖಾಲಿಯಿರುವ ಹುದ್ದೆಗಳಿಗೆ ನೇರ ನೇಮಕಾತಿ ಹಾಗೂ ಬಡ್ತಿಗೆ ಇರುವ ಅನುಪಾತದಂತೆ ಬಡ್ತಿಗೆ ಅರ್ಹರಿರುವ ವಿಷಯವಾರು 11 ಜನ ಪ್ರಾಥಮಿಕ ಶಾಲಾ ಶಿಕ್ಷಕರಿಗೆ ದಿನಾಂಕ:15/09/2020ರಂದು ಕೌನ್ಸಿಲಿಂಗ್ ಮುಖಾಂತರ ಬಡ್ತಿ ನೀಡಲಾಗಿದೆ.</td></tr>
<tr><td>ಆ.</td><td>ಜಿಲ್ಲೆಯ ಶಿರಸಿ ಶೈಕ್ಷಣಿಕ ವಿಭಾಗದಲ್ಲಿ ಬರುವ ತಾಲ್ಲೂಕಿನಲ್ಲಿ ಎಷ್ಟು ಶಿಕ್ಷಕರಿಗೆ ಬಡ್ತಿ ನೀಡಲಾಗಿದೆ: ಬಡ್ತಿ ನೀಡುವಾಗ ಸರ್ಕಾರದ ನಿಯಮ ಉಲ್ಲಂಘನೆ ಮಾಡಿರುವುದು ನಿಜವೇ: (ತಾಲ್ಲೂಕುವಾರು ಶಿಕ್ಷಕರ ಶಾಲಾವಾರು ಸರ್ಕಾರದ ನಿಯಮದಂತೆ ಸವಿಸ್ತಾರ ವರದಿ ನೀಡುವುದು)</td><td>
<table>
<tr><th>ಕ್ರಸಂ</th><th>ತಾಲ್ಲೂಕು</th><th>ಪದೋನ್ನತ ಮುಖ್ಯ ಶಿಕ್ಷಕರು</th><th>ಪದವಿಧರೇತರ ಮುಖ್ಯ ಶಿಕ್ಷಕರು</th></tr>
<tr><td>1</td><td>ಶಿರಸಿ</td><td>08</td><td>02</td></tr>
<tr><td>2</td><td>ಸಿದ್ದಾಪುರ</td><td>07</td><td>00</td></tr>
<tr><td>3</td><td>ಯಲ್ಲಾಪುರ</td><td>06</td><td>00</td></tr>
<tr><td>4</td><td>ಮುಂಡಗೋಡ</td><td>07</td><td>01</td></tr>
<tr><td>5</td><td>ಹಳಿಯಾಳ</td><td>09</td><td>01</td></tr>
<tr><td>6</td><td>ಜೋಯಿಡಾ</td><td>01</td><td>00</td></tr>
<tr><td></td><td>ಒಟ್ಟು</td><td>38</td><td>04</td></tr>
</table>
ಈ ಮೇಲಿನ ಬಡ್ತಿಗಳನ್ನು ನೀಡುವಾಗ ಸರ್ಕಾರದ ಯಾವುದೇ ನಿಯಮಗಳನ್ನು ಉಲ್ಲಂಘಿಸಿರುವುದಿಲ್ಲ.</td></tr>
<tr><td>ಇ.</td><td>ಸದರಿ ಶಿಕ್ಷಕರ ತಾಲ್ಲೂಕುವಾರು ಮಾಹಿತಿ ನೀಡುವಲ್ಲಿ ಶಿಕ್ಷಣ ಇಲಾಖೆ ಅವ್ಯವಹಾರಕ್ಕೆ ಆಸ್ಪದವಾಗುವಂತೆ ಕೆಲವೊಂದು ತಪ್ಪು ಮಾಹಿತಿ ನೀಡಿರುತ್ತಾರೆಂದು ತಿಳಿದು ಬಂದಿದ್ದು: ಈ ಕುರಿತು ಸರ್ಕಾರ ಸೂಕ್ತ ತನಿಖೆ ಮಾಡುವುದೇ? (ವಿವರ ನೀಡುವುದು)</td><td>ಈ ಬಗ್ಗೆ ಸರ್ಕಾರಕ್ಕೆ ಪ್ರಸ್ತಾವನೆ / ದೂರು ಬಂದಿರುವುದಿಲ್ಲ.</td></tr>
</table>

ಸಂಖ್ಯೆ: ಇಪಿ 130 ಎಸ್‌ಓಹೆಚ್ 2020

(ಎಸ್. ಸುರೇಶ್ ಕುಮಾರ್)
ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಹಾಗೂ ಸಕಾಲ ಸಚಿವರು